ಕರ್ನಾಟಕ ಸರ್ಕಾರ

ನಿರ್ದೇಶಕರು(ಪ್ರೌಢಶಿಕ್ಷಣ), ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು 560002

**ಸಂಖ್ಯೆ: ಸಂ.ನೃ.ನಾ.ವಿ.ಕಾ–ರಾ.ನಾ.ಸ್ಪ/2018–19** **ದಿನಾಂಕ:04/09/2018**

ಸುತ್ತೋಲೆ

ವಿಷಯ: 2018–19ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆ ಏರ್ಪಡಿಸುವ ಕುರಿತು.

ಉಲ್ಲೇಖ: ವಿ.ಐ.ಟಿ. ರವರ ಪತ್ರ ಸಂಖ್ಯೆ: ವಿ.ಎಂ.24[18]ಇಎಕ್ಸ್‌ಟಿ/ಎನ್.ಎಸ್.ಎಸ್.2018 ದಿನಾಂಕ: 07/06/2018

******

ವಿಷಯಕ್ಕೆ ಸಂಬಂಧಿಸಿದಂತೆ, ನಿರ್ದೇಶಕರು (ಪ್ರೌಢಶಿಕ್ಷಣ), ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. ಮತ್ತು ರಾಜ್ಯದ 34 ಡಯಟ್‌ಗಳ ವತಿಯಿಂದ 2018–19ನೇ ಸಾಲಿನಲ್ಲಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಶಾಲಾ, ಬ್ಲಾಕ್, ಜಿಲ್ಲಾ ಹಂತದಲ್ಲಿ ವಿಜ್ಞಾನ ನಾಟಕ ಸ್ಪರ್ಧೆಯು ಪೂರ್ಣಗೊಂಡಿದೆ. ಜಿಲ್ಲಾ ಹಂತದಲ್ಲಿ ಪ್ರಥಮ ಸ್ಥಾನ ಪಡೆದ ತಂಡಗಳು, ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿತ್ತಿದ್ದು, ಸದರಿ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ತಂಡಗಳಿಗೆ ವಿಭಾಗೀಯ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯನ್ನು ಆರು ವಿಭಾಗದ ಡಯಟ್‌ಗಳಿಂದ ನಡೆಸಲ್ಪಡುತ್ತದೆ. [ ಈ ಕಛೇರಿ ಸುತ್ತೋಲೆ ಸಮಸಂಖ್ಯೆ ದಿನಾಂಕ: 27/06/2018]

ವಿಭಾಗ ಮಟ್ಟದ ಸ್ಪರ್ಧೆಗಳನ್ನು ದಿನಾಂಕ: 15/10/2018ರೊಳಗೆ ಪೂರ್ಣಗೊಳಿಸುವುದು.

**<u>ವಿಭಾಗ ಮಟ್ಟದ ಸ್ಪರ್ಧೆಗೆ ಮಾಡಿಕೊಳ್ಳಬೇಕಾದ ಅಗತ್ಯ ಸಿದ್ಧತೆಗಳು:</u>**

**ವಿಜ್ಞಾನ ನಾಟಕವು ಈ ಕೆಳಕಂಡ ಯಾವುದಾದರೊಂದು ವಿಷಯಕ್ಕೆ ಸಂಬಂಧಿಸಿದಂತೆ ಇರಬೇಕು.**

| ❖ **Main Theme : Science and Society: ವಿಜ್ಞಾನ ಮತ್ತು ಸಮಾಜ** | | |
|---|---|---|
| Sub Themes: | 1 .Digital India: | ಡಿಜಿಟಲ್ ಭಾರತ |
| | 2.Cleanliness, Health and Hygiene | ಸ್ವಚ್ಛತೆ, ಆರೋಗ್ಯ ಮತ್ತು ನೈರ್ಮಲ್ಯ |
| | 3. Green ad clean Energy | ಹಸಿರು ಮತ್ತು ಶುದ್ಧ ಶಕ್ತಿ |
| | 4.Environmental conservation | ಪರಿಸರ ಸಂರಕ್ಷಣೆ |

1. ಉತ್ತಮ ಬೆಳಕು, ವಿದ್ಯುತ್/ಜನರೇಟರ್, ವೇದಿಕೆ, ಹೊಂದಿರುವ ಸಭಾಂಗಣದ ವ್ಯವಸ್ಥೆ. ನಿಮ್ಮ ವಿಭಾಗದ ಜಿಲ್ಲೆಗಳಿಂದ ಭಾಗವಹಿಸುತ್ತಿರುವ [ ಪ್ರತಿ ಜಿಲ್ಲೆಯಿಂದ 6 ವಿದ್ಯಾರ್ಥಿಗಳು ಹಾಗೂ ಒಬ್ಬ ಸಹ ಶಿಕ್ಷಕರಂತೆ] 48 ವಿದ್ಯಾರ್ಥಿಗಳು ಮತ್ತು 6 ಮಾರ್ಗದರ್ಶಿ ಶಿಕ್ಷಕರು ಒಟ್ಟು 54 ಜನಗಳಿಗೆ ಉತ್ತಮ ತಂಗುವ ವ್ಯವಸ್ಥೆ, ನಿಮ್ಮ ವಿಭಾಗದ ಜಿಲ್ಲೆಳಿಂದ ಭಾಗವಹಿಸುತ್ತಿರುವ ಪ್ರತಿ ಜಿಲ್ಲೆಯಿಂದ 6

2. ತೀರ್ಪುಗಾರರ ಆಯ್ಕೆ: ನಾಟಕ ಕಲೆಯಲ್ಲಿ ಪರಿಣಿತಿ ಪಡೆದ , ವೈಜ್ಞಾನಿಕ ನಾಟಕವನ್ನು ಎಲ್ಲಾ ಆಯಾಮಗಳಲ್ಲಿ ವಿಶ್ಲೇಷಿಸಿ ತೀರ್ಪು ನೀಡುವ ಸಾಮರ್ಥ್ಯವಿರುವ ರಂಗಭೂಮಿಯ ತಜ್ಞರನ್ನು ತೀರ್ಪುಗಾರರನ್ನಾಗಿ ಆಯ್ಕೆ ಮಾಡಿಕೊಳ್ಳುವುದು.

3. ಎಲ್ಲಾ ನಾಟಕಗಳ ವೀಡಿಯೋ ಚಿತ್ರೀಕರಣಕ್ಕೆ ಹಾಗೂ ಫೋಟೋ ತೆಗೆಯಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವುದು.

**ನಾಟಕ ಸ್ಪರ್ಧೆಯ ನಿಯಮಗಳು ಕೆಳಕಂಡಂತಿದೆ.:-**

- **ಸ್ಪರ್ಧಿಗಳು:** 8 ರಿಂದ 10 ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ನಿಯರು
- **ಸ್ಪರ್ಧಿಗಳ ಸಂಖ್ಯೆ:** ಒಂದು ತಂಡದಲ್ಲಿ ಗರಿಷ್ಠ 8 ಜನ (ವಾದಕರು, ಹಿನ್ನೆಲೆ ಗಾಯಕರು .. ಸೇರಿ)
- **ನಾಟಕದ ಅವಧಿ:** ಪ್ರತಿ ನಾಟಕಕ್ಕೆ 30 ನಿಮಿಷಗಳು.
- ನಾಟಕವು ನಿಗಧಿಪಡಿಸಿರುವ ಮೈನ್ ಥೀಮ್ ಮತ್ತು ಸಬ್ ಥೀಮ್ ಹೊಂದಿದಂತೆ ವೈಜ್ಞಾನಿಕ ಸಂದೇಶವನ್ನು ಹೊಂದಿರಬೇಕು.
- ನಾಟಕ ಪ್ರದರ್ಶನವಾಗುತ್ತಿರುವ ಸಮಯದಲ್ಲಿ ವಿದ್ಯಾರ್ಥಿ/ನಿ ಯರೇ ಸಂಪೂರ್ಣವಾಗಿ ಎಲ್ಲಾ ಪ್ರಕ್ರಿಯೆಗಳಲ್ಲಿ ತೊಡಗಬೇಕು.
- ನಾಟಕವನ್ನು ಮಾನ್ಯತೆ ಪಡೆದ ಯಾವುದೇ ಭಾರತೀಯ ಭಾಷೆಯಲ್ಲಿ ಪ್ರಸ್ತುತ ಪಡಿಸಬಹುದು.
- ಭಾಗವಹಿಸುತ್ತಿರುವ ಶಾಲೆಗಳು ನಾಟಕದ Script ನ್ನು ನಾಟಕ ಪ್ರದರ್ಶನದ ಮೊದಲು ತೀರ್ಪುಗಾರರಿಗೆ ಸಲ್ಲಿಸುವುದು. (3 ಪ್ರತಿಗಳು)

ಸ್ಪರ್ಧೆಯಲ್ಲಿ ಭಾಗವಹಿಸುವ ವಿಜ್ಞಾನ ನಾಟಕಗಳನ್ನು ಈ ಕೆಳಗಿನಂತೆ ಅಂಕಗಳನ್ನು ನೀಡಿ ನಿರ್ಣಯಿಸುವುದು. ಗರಿಷ್ಠ ಅಂಕಗಳು 100 ಆಗಿರುತ್ತದೆ.

| | | |
|---|---|---|
| ನಾಟಕದ ಪ್ರಸ್ತುತಿ. | Presentation of the drama | 50 ಅಂಕಗಳು |
| ನಾಟಕದಲ್ಲಿನ ವೈಜ್ಞಾನಿಕ ವಿಷಯ | Scientific content in the Drama | 30 ಅಂಕಗಳು |
| ನಾಟಕದ ಪರಿಣಾಮ | Effectiveness of the drama | 20 ಅಂಕಗಳು |

ವಿಭಾಗ ಮಟ್ಟದ ವಿಜ್ಞಾನ ನಾಟಕ ಸ್ಪರ್ಧೆಯ ಆಯೋಜನೆಗಾಗಿ ರೂ. 20,000/- ಗಳ (ರೂ. ಇಪ್ಪತ್ತು ಸಾವಿರ ಮಾತ್ರ ) ಅನುದಾನವನ್ನು ನಿಗಧಿಪಡಿಸಲಾಗಿದೆ. ಈ ಮೊತ್ತವನ್ನು ಕೆಳಕಾಣಿಸಿದ ರೀತಿಯಲ್ಲಿ ನಿಯಾಮಾನುಸಾರ ವೆಚ್ಚ ಮಾಡಲು ಅನುಮತಿಸಿದೆ.

| ಕ್ರ.ಸ. | ವಿವರ | ಮೊತ್ತ |
|---|---|---|
| 1 | **ಬಹುಮಾನ**<br>ಪ್ರಥಮ -<br>ದ್ವಿತೀಯ -<br>ತೃತೀಯ -<br>ಉತ್ತಮ ನಿರ್ದೇಶಕ, ಉತ್ತಮ ನಾಟಕ ರಚನಕಾರರು, ಉತ್ತಮ ನಟ, ಉತ್ತಮ ನಟಿ, ತಲಾ ಒಂದರಂತೆ 4 ಬಹುಮಾನಗಳು ರೂ. 300/- ರಂತೆ – 300 X 4-1200 | <br>2800=00<br>2400=00<br>2000=00<br><br>1200=00 |

| | | |
|---|---|---|
| 2 | ತೀರ್ಪುಗಾರರ ಸಂಭಾವನೆ ( 3 X 1000] | ರೂ. 3000=00 |
| 4 | ಊಟ, ಉಪಹಾರ ಸ್ನ್ಯಾಕ್ಸ್ ಕಾಫೀ/ಟೀ (ಕಾರ್ಯಕ್ರಮದ ಹಿಂದಿನ ರಾತ್ರಿ ಮತ್ತು ಕಾರ್ಯಕ್ರಮದ ದಿನದಂದು.<br>ವೇದಿಕೆ ,ಬೆಳಕಿನ ವ್ಯವಸ್ಥೆ,ಸಾದಿಲ್ವಾರು . ವೀಡಿಯೋ ಮತ್ತು ಛಾಯ ಚಿತ್ರೀಕರಣ ,ತಂಗುವ ವ್ಯವಸ್ಥೆ. | ರೂ. 8600-00 |
| | ಒಟ್ಟು | ರೂ 20000-00 |

**ಕಾರ್ಯಕ್ರಮ ಮುಗಿದ ಕೂಡಲೇ ನಿರ್ದೇಶಕರು (ಪ್ರೌಢಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ವರದಿ ಸಲ್ಲಿಸುವುದು.**

Kulamaah

ನಿರ್ದೇಶಕರು,(ಪ್ರೌಢಶಿಕ್ಷಣ)
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು

ಗೆ:

ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಹಾಗೂ

ಪ್ರತಿಯನ್ನು:

1] ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು ರವರ ಮಾಹಿತಿಗಾಗಿ.
2] ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ, ನೃಪತುಂಗ ರಸ್ತೆ, ಬೆಂಗಳೂರು.
3] ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗ/ಧಾರವಾಡ
4] ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು
5] ನಿರ್ದೇಶಕರು, ಪ್ರಾಥಮಿಕ/ಪ್ರೌಢ/ ಅಲ್ಪ ಸಂಖ್ಯಾತ ಭಾಷಾ ಶಾಲೆಗಳು, ಬಎಂಗಳೂರು.
6] ಸಹ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು/ಮೈಸೂರು/ಗುಲ್ಬರ್ಗ/ಬೆಳಗಾಂ
7] ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) {ಅಭಿವೃದ್ಧಿ) ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸೂಕ್ತ ಕ್ರಮಕ್ಕಾಗಿ.
8] ಸಂಯೋಜಕರು, ವಿ.ಐ.ಟಿ.ಎಂ. ಅಂಚೆ ಪೆಟ್ಟಿಗೆ ಸಂಖ್ಯೆ: 5216, ಕಸ್ತುರಬಾ ರಸ್ತೆ, ಬೆಂಗಳೂರು-1 ಇವರಿಗೆ ಮಾಹಿತಿಗಾಗಿ.